## **3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

## **ದಾವಣಗೆರೆ**

**ಸಿ ಸಿ ನಂ.6273/2022**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಹದಡಿ ಪೋಲಿಸ್ ಠಾಣೆ,
ದಾವಣಗೆರೆ.

Vs.

ಆರೋಪಿತರು ಃ ಗುರುಮೂರ್ತಿ ಮತ್ತು ಇತರರು.

## **ದೋಷಾರೋಪಣೆ**

ನಾನು **ಶ್ರೀ ಸಿದ್ಧರಾಜು ಎನ್.ಕೆ. ಬಿ.ಎ., ಎಲ್.ಎಲ್.ಬಿ.**, 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ದಾವಣಗೆರೆ,

ಆರೋಪಿತರಾದ ನೀವು

1. ಗುರುಮೂರ್ತಿ ತಂದೆ ವೀರಪ್ಪ,
   ವಯಸ್ಸುಃ 52 ವರ್ಷ,
2. ಪಾಲಾಕ್ಷಪ್ಪ ತಂದೆ ವೀರಪ್ಪ,
   ವಯಸ್ಸುಃ 50 ವರ್ಷ,
3. ನಂದೀಶ ತಂದೆ ಗುರುಮೂರ್ತಿ,
   ವಯಸ್ಸುಃ 22 ವರ್ಷ,
   ಎಲ್ಲರ ಕೆಲಸಃ ವ್ಯವಸಾಯ,
   ವಾಸಃ ಕಂದಗಲ್ಲು ಗ್ರಾಮ, ದಾವಣಗೆರೆ ತಾಲ್ಲೂಕು.

ಎಂಬುವವರ ಮೇಲೆ ಆಪಾದನೆ ಹೊರಿಸುವುದೇನೆಂದರೆ,

ಮೊದಲನೇಯದಾಗಿ ದಿನಾಂಕಃ19.06.2022 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಹದಡಿ ಪೋಲಿಸ್ ಠಾಣಾ ಸರಹದ್ದಿನ ಕಂದಗಲ್ಲು ಗ್ರಾಮದ ರಿ.ಸರ್ವೆ ನಂ.94/3 ಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನಿಮ್ಮ ಜಮೀನಿನ ಪಕ್ಕದಲ್ಲಿ ಚಾಸಾ.1 ರವರ ಜಮೀನು ಇದ್ದು, ನೀವು ಸರ್ವೆಯರ್ ರವರಿಂದ ಜಮೀನನ್ನು ಅಳತೆ ಮಾಡಿಸಿದ್ದರಿಂದ ಚಾಸಾ.1 ರವರು ಜಮೀನನ್ನು ಒತ್ತುವರಿ ಮಾಡಿರುತ್ತಾರೆಂದು ಹೇಳಿ ಹದ್ದುಬಸ್ತು ಅಳತೆ ಮಾಡಿ ಕಲ್ಲನ್ನು ಹಾಕಿ ನಂತರ ಚಾಸಾ.1 ರವರ ಹೊಲದ ಬದುವನ್ನು ಕಡಿಯಲು ಮುಂದಾದ್ದರಿಂದ ಚಾಸಾ.1 ರವರು ತಾವು ಅಳತೆ ಮಾಡಿಸುತ್ತೇವೆ ಅಲ್ಲಿಯವರೆಗೆ ನಿಮಗೆ ಸಮಾಧಾನ ಇಲ್ವಾ ಎಂದು ಕೇಳಿದ್ದಕ್ಕೆ, ಆರೋಪಿತರಾದ ನೀವು ನಿಮ್ಮ ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಬಾಯಿಗೆ ಬಂದಂತೆ ಸೂಳೇಮಗನೇ, ನಿನ್ನ ತಾಯಿನಾಡ ನೀನ್ಯಾವನಲೇ ಕೇಳೋಕೆ ಎಂದು ಅವಾಚ್ಯ ಶಬ್ದಗಳಿಂದ ಶಾಂತಿಭಂಗವನ್ನುಂಟು ಮಾಡಲು ಉದ್ದೇಶಪೂರ್ವಕವಾಗಿ ಬೈದಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ 2 ಮತ್ತು 3 ನೇ ಆರೋಪಿತರಾದ ನೀವು ಕೈಗಳಿಂದ ಹೊಡೆದಿದ್ದಲ್ಲದೇ, 1 ನೇ ಆರೋಪಿಯಾದ ನೀವು ಚಾಸಾ.1 ರವರ ಹೃದಯ ಭಾಗಕ್ಕೆ ಕೈಯಿಂದ ಗುದ್ದಿ ನೋವುಂಟು ಮಾಡಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 323 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ 1 ನೇ ಆರೋಪಿಯಾದ ನೀವು ಸ್ಥಳದಲ್ಲಿ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಅದರಿಂದ ಅವರ ಹೊಟ್ಟೆಗೆ ಸ್ವಇಚ್ಛೆಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 324 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಿಸಲ್ಪಡುವಂತಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಈ ಮೇಲೆ ತಿಳಿಸಿದ ಆರೋಪಗಳ ವಿಚಾರಣೆಯು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿರುವುದರಿಂದ ವಿಚಾರಣೆಯಾಗಲು ಆದೇಶಿಸಿದ್ದೇನೆ.

ಸಹಿ/

ದಿನಾಂಕಃ15.03.2023

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ದಾವಣಗೆರೆ.

<u>**1 ನೇ ಆರೋಪಿ ಹೇಳಿಕೆ**</u>

ಪ್ರಶ್ನೆ.1 ಃ ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಗಳು ತಿಳಿಯಿತೆ?
ಉತ್ತರ ಃ ತಿಳಿಯಿತು

ಪ್ರಶ್ನೆ.2 ಃ ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ ?
ಉತ್ತರ ಃ ಇಲ್ಲ ವಿಚಾರಣೆ ಆಗಬೇಕು

<u>**2 ನೇ ಆರೋಪಿ ಹೇಳಿಕೆ**</u>

ಪ್ರಶ್ನೆ.1 ಃ ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಗಳು ತಿಳಿಯಿತೆ?
ಉತ್ತರ ಃ ತಿಳಿಯಿತು

ಪ್ರಶ್ನೆ.2 ಃ ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ ?
ಉತ್ತರ ಃ ಇಲ್ಲ ವಿಚಾರಣೆ ಆಗಬೇಕು

<u>**3 ನೇ ಆರೋಪಿ ಹೇಳಿಕೆ**</u>

ಪ್ರಶ್ನೆ.1 ಃ ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಗಳು ತಿಳಿಯಿತೆ?
ಉತ್ತರ ಃ ತಿಳಿಯಿತು

ಪ್ರಶ್ನೆ.2 ಃ ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ ?
ಉತ್ತರ ಃ ಇಲ್ಲ ವಿಚಾರಣೆ ಆಗಬೇಕು

(ಮೇಲೆ ನಮೂದು ಮಾಡಿದ ಆರೋಪಿತರ ಹೇಳಿಕೆಯನ್ನು ನನ್ನ ಉಪಸ್ಥಿತಿಯಲ್ಲಿ ತೆಗೆದುಕೊಂಡಿದ್ದು, ಸದರಿ ಹೇಳಿಕೆ ಆರೋಪಿತರು ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

ಸಹಿ/

ದಿನಾಂಕಃ 15.03.2023

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ದಾವಣಗೆರೆ.